2. ಆನೇಕಲ್ ತಾಲ್ಲೂಕು ಕೈಮಗ್ಗದ ನೇಕಾರರ ಉತ್ಪಾದನೆ ಮತ್ತು ಮಾರಾಟ ಸಹಕಾರ ಸಂಘ ನಿ, ಆನೇಕಲ್

3. ಪ್ರಾತಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ರಾಮನಗರ.

ಈ ಸಂಘಗಳು ದಿನಾಂಕ:31.3.2003 ರೊಳಗೆ ಚುನಾವಣೆ ನಡೆಸಬೇಕಾಗಿದ್ದು, ಚುನಾವಣೆಗಳನ್ನು ನಡೆಸಿರುವುದಿಲ್ಲ. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 28 ಎ (4) ರಂತೆ ಆಡಳಿತ ಮಂಡಳಿ ಪದಾವಧಿಯು 5 ಸಹಕಾರ ವರ್ಷಗಳಾಗಿದ್ದು, ಅವಧಿ ಮುಕ್ತಾಯದ ಮೊದಲು ಹದಿನೈದು ದಿನಗಳೊಳಗೆ ಚುನಾವಣೆ ನಡೆಸಬೇಕಾಗಿರುತ್ತದೆ. ಕ್ರಮಸಂಖ್ಯೆ (1): ಈ ಸಂಘದಲ್ಲಿ ಯಾವುದೇ ಚಟುವಟಿಕೆ ನಡೆಯದೇ ನಿಷ್ಕ್ರಿಯವಾಗಿರುವುದರಿಂದ ಕಲಂ 72 ರಡಿ ಸಮಾಪನೆಗೆ ಕ್ರಮವಹಿಸಲಾಗಿದೆ. ಕ್ರಮ ಸಂಖ್ಯೆ (2) ಈ ಸಂಘವು ನಿಗದಿತ ಅವಧಿಯೊಳಗೆ ಚುನಾವಣೆ ನಡೆಸಲು ವಿಫಲವಾಗಿರುವುದರಿಂದ ಕಲಂ 28ಎ (5) ರಡಿ ಆಡಳಿತಗಾರರನ್ನು ನೇಮಕ ಮಾಡಿದೆ. ಕ್ರಮಸಂಖ್ಯೆ (3) : ರ ಸಂಘದ ಆಡಳಿತ ಮಂಡಳಿಯನ್ನು ದಿನಾಂಕ: 31/3/2003 ರ ಪೂರ್ವದಲ್ಲಿ ಕಲಂ 30 (1) ರಡಿಯಲ್ಲಿ ರದ್ದತಿಗೊಳಿಸಲಾಗಿದೆ.

ಇ) ಇಂತಹ ಪ್ರಕರಣಗಳು ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ತೋಟಗಾರಿಕೆ ಬೆಳೆಗಳ ನಷ್ಟಕ್ಕೆ ಪರಿಹಾರ

...4700 (5433) : ಶ್ರೀ ಸಿಂಧ್ಯ ಪಿ.ಜಿ.ಆರ್. (ಕನಕಪುರ) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಳೆದ 3 ವರ್ಷಗಳ ಬರಗಾಲದಿಂದ ತೋಟಗಾರಿಕೆ ಬೆಳೆಗಳಿಗೆ ಎಷ್ಟು ನಷ್ಟ ಉಂಟಾಗಿದೆ? (ಜಿಲ್ಲಾವಾರು ವಿವರಗಳನ್ನು ಕೊಡುವುದು)

ಆ) ತೋಟಗಾರಿಕೆ ಬೆಳೆಗಳ ನಷ್ಟಕ್ಕೆ ಪರಿಹಾರ ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೆ;

ಇ) ಇದ್ದಲ್ಲಿ ಯಾವಾಗ ಜಾರಿಗೆ ತರಲಾಗುವುದು? (ವಿವರಗಳನ್ನು ಕೊಡುವುದು)

ಶ್ರೀ ಎಂ. ಶಿವಣ್ಣ (ತೋಟಗಾರಿಕೆ ಸಚಿವರು)

ಅ) ಪ್ರಾಥಮಿಕ ಅಂದಾಜಿನ ಪ್ರಕಾರ 45000 ಹೆಕ್ಟೇರ್ ಪ್ರದೇಶದಲ್ಲಿನ ಬಹುವಾರ್ಷಿಕ ತೋಟಗಾರಿಕೆ ಬೆಳೆಗಳು ಒಣಗಿರುತ್ತವೆ ಮತ್ತು 5.74 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿನ ಫಸಲು ನಷ್ಟವಾಗಿರುತ್ತದೆ. ಇದರಲ್ಲಿ ಗಿಡಗಳು ಒಣಗಿರುವುದು, ಬೆಳೆ ನಾಶ ಮತ್ತು ಬಿತ್ತನೆ ಆಗದೇ ಇರುವುದರಿಂದಾದ ನಷ್ಟದ ಅಂದಾಜು ಸೇರ್ಪಡೆಯಾಗಿದೆ. ಇದರಿಂದ ಆದ ಒಟ್ಟು ನಷ್ಟ ರೂ. 3506 ಕೋಟಿ ಎಂದು ಅಂದಾಜು ಮಾಡಲಾಗಿದೆ. ಬಹು ವಾರ್ಷಿಕ ತೋಟಗಾರಿಕೆ ಬೆಳೆಗಳು ಒಣಗಿರುವುದರಿಂದ ರೂ. 1244 ಕೋಟಿ ನಷ್ಟವಾಗಿದೆಯೆಂದು ಅಂದಾಜು ಮಾಡಲಾಗಿದೆ, ಜಿಲ್ಲಾವಾರು ವಿವರಗಳನ್ನು ಕೆಳಗೆ ನೀಡಲಾಗಿದೆ.

ಕ್ರಮ ಸಂ	ಜಿಲ್ಲೆ	ಅಂದಾಜು ನಷ್ಟ (ರೂ. ಕೋಟಿಗಳಲ್ಲೀ)
1.	ಬೆಂಗಳೂರು ನಗರ	19.01
2.	ಬೆಂಗಳೂರು ಗ್ರಾಮಾಂತರ	13.38

1	2	3
3.	ಕೋಲಾರ	4.49
4.	ಚಿತ್ರದುರ್ಗ	49.91
5.	ದಾವಣಗೆರೆ	161.00
6.	ತುಮಕೂರು	322.12
7.	ಶಿವಮೊಗ್ಗ	4.20
8.	ಮೈಸೂರು	0.04
9.	ಚಾಮರಾಜನಗರ	0.31
10.	ಹಾಸನ	0.25
11.	ಚಿಕ್ಕಮಗಳೂರು	52.39
12.	ಬಾಗಲಕೋಟೆ	7.99
13.	ಹಾವೇರಿ	89.57
14.	ಶಿರಸಿ	1.17
15.	ಬಿಜಾಪುರ	464.31
16.	ಗದಗ	2.54
17.	ಬೆಳಗಾಂ	31.79
18.	ಕೊಪ್ಪಳ	3.15
19.	ಬೀದರ್	0.06
20.	ಗುಲ್ಬರ್ಗಾ	15.97
21.	ರಾಯಚೂರು	0.60
	ಒಟ್ಟು	1244.25

ಆ) ತೋಟಗಾರಿಕೆ ಇಲಾಖೆಯಲ್ಲಿ ಬೆಳೆ ನಷ್ಟಕ್ಕೆ ಪರಿಹಾರ ನೀಡುವ ಯಾವುದೇ ಯೋಜನೆ ಇರುವುದಿಲ್ಲ. ಬರಗಾಲದ ಪರಿಣಾಮವಾಗಿ ಉಂಟಾದ ನಷ್ಟದ ಅಂದಾಜು ಮಾಡಲಾಗಿದ್ದು, ಈ ಅನ್ವಯ ತೋಟಗಾರಿಕೆ ಬೆಳೆಗಳಿಗೆ 192.5 ಕೋಟಿ ರೂ.ಗಳ ಪರಿಹಾರದ ನೆರವನ್ನು ಕೋರಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.

ಇ) ಕೇಂದ್ರ ಸರ್ಕಾರದಿಂದ ಮಂಜೂರಾತಿ ದೊರೆತ ನಂತರ ಪರಿಹಾರ ನೀಡಲು ಸಾಧ್ಯವಾಗುತ್ತದೆ.

ಕರ್ನಾಟಕ ರಾಜ್ಯ ಕೋ ಆಪರೇಟಿವ್ ಅಪೆಕ್ಸ್ ಬ್ಯಾಂಕಿನ ಮೂಲಕ ವಿದ್ಯುತ್ ದೂರವಾಣಿ, ನೀರಿನ ಬಿಲ್ ಪಾವತಿ

4701 (5208) : ಶ್ರೀ ಸೋಮಣ್ಣ ವಿ. (ಬಿನ್ನಿಪೇಟೆ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರಿನ ವಿವಿಧ ಬಡಾವಣೆಗಳಲ್ಲಿರುವ ಕನಾಟಕ ರಾಜ್ಯ ಕೋ ಆಪರೇಟಿವ್ ಅಪೆಕ್ಸ್ ಬ್ಯಾಂಕಿನ ಮೂಲಕ ವಿದ್ಯುತ್ ನೀರು ದೂರವಾಣಿ, ಬೆಂಗಳೂರು ಮಹಾ ನಗರ ಪಾಲಿಕೆ ಆಸ್ತಿ ತೆರಿಗೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಸ್ತಿ ತೆರಿಗೆ ಪಾವತಿ ಮಾಡುವ ಸೌಲಭ್ಯ ಕ್ಷಸಲಾಗಿದೆಯೇ?